INSTAKAS

# ಗ್ರೇಟ್ ಇಂಡಿಯನ್ ಬಸ್ಟರ್ಡ್

## ಇದೀಗ ಸುದ್ದಿಯಲ್ಲಿದೆ:

**ರಾಜಸ್ಥಾನ ಮತ್ತು ಗುಜರಾತ್‌ನಲ್ಲಿನ "ಹಸಿರು ಇಂಧನ ಮಾರ್ಗ" (GEC) ವಿದ್ಯುತ್ ಪ್ರಸರಣ ಯೋಜನೆಗಳಿಗೆ** ಸಂಬಂಧಿಸಿದಂತೆ, ಸಂರಕ್ಷಣಾ ಪ್ರದೇಶಗಳನ್ನು ಪರಿಷ್ಕರಿಸುವ ಮತ್ತು ವೈಜ್ಞಾನಿಕವಾಗಿ ಮರುಹೊಂದಾಣಿಕೆ ಮಾಡುವ ಮೂಲಕ, "ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಗಳ" (GIB) ಸಂರಕ್ಷಣೆಗಾಗಿ ಇರುವ ಸುರಕ್ಷತಾ ಕ್ರಮಗಳನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಕಟ್ಟುನಿಟ್ಟುಗೊಳಿಸಿದೆ.

## ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಯ ಬಗ್ಗೆ:



ಬಸ್ಟರ್ಡ್

### ವೈಜ್ಞಾನಿಕ ಹೆಸರು:

**ಆರ್ಡಿಯೋಟಿಸ್ ನಿಗ್ರಿಸೆಪ್ಸ್ (Ardeotis nigriceps).**

**ಹಾರಬಲ್ಲ ಅತಿ ಭಾರವಾದ ಪಕ್ಷಿಗಳಲ್ಲಿ ಒಂದು:-** ಸುಮಾರು **15 ಕೆಜಿ ವರೆಗೆ** ತೂಕವನ್ನು ಹೊಂದಿರುತ್ತದೆ. ಇದರ ತಿಳಿ ಬಣ್ಣದ ಕತ್ತು ಮತ್ತು ತಲೆ ಮತ್ತು **ಹಣೆಯ ಮೇಲೆ ಎದ್ದುಕಾಣುವ ಕಪ್ಪು ಬಣ್ಣದ ಶಿರಸ್ತ್ರಾಣದಂತಹ** ವಿನ್ಯಾಸದಿಂದ ಇದನ್ನು ಸುಲಭವಾಗಿ ಗುರುತಿಸಬಹುದು.

**ಈ ಪಕ್ಷಿಯು ಭಾರತೀಯ ಉಪಖಂಡಕ್ಕೆ ಮಾತ್ರ ಸ್ಥಳೀಯವಾಗಿದೆ:-** ಇದು **ರಾಜಸ್ಥಾನ (ಮರುಭೂಮಿ ರಾಷ್ಟ್ರೀಯ ಉದ್ಯಾನವನ), ಗುಜರಾತ, ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ ಮತ್ತು ಆಂಧ್ರಪ್ರದೇಶ** ರಾಜ್ಯಗಳಲ್ಲಿ ಹಾಗೂ ಪಾಕಿಸ್ತಾನದ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ.

## ಸಂರಕ್ಷಣಾ ಸ್ಥಿತಿಗತಿ:

**IUCN ಕೆಂಪು ಪಟ್ಟಿಯಲ್ಲಿ:-** ತೀವ್ರವಾಗಿ ಅಳಿವಿನಂಚಿನಲ್ಲಿರುವ (CR)

**ವನ್ಯಜೀವಿ (ಸಂರಕ್ಷಣಾ) ಕಾಯಿದೆ, 1972:-** ಅನುಸೂಚಿ I

**CITES ನ ಅಡಿಯಲ್ಲಿ:-** ಅನುಬಂಧ I

## ಸಂರಕ್ಷಣಾ ಕ್ರಮಗಳು:

### 'ಪ್ರಾಜೆಕ್ಟ್ ಗ್ರೇಟ್ ಇಂಡಿಯನ್ ಬಸ್ಟರ್ಡ್'ನ ಬಗ್ಗೆ:

- **ಆರಂಭ:-** ಇದು **2018 ರಲ್ಲಿ ರಾಜಸ್ಥಾನ** ಸರ್ಕಾರವು ಪ್ರಾರಂಭಿಸಿದ ಯೋಜನೆಯಾಗಿದೆ.

**ಉದ್ದೇಶ:-** ತೀವ್ರವಾಗಿ ಅಳಿವಿನಂಚಿನಲ್ಲಿರುವ ಗ್ರೇಟ್ ಇಂಡಿಯನ್ ಬಸ್ಟರ್ಡ್‌ಗಳ, **ಉಳಿದಿರುವ ಸಂತತಿಯನ್ನು ಸಂರಕ್ಷಿಸುವುದು** ಇದರ ಮುಖ್ಯ ಉದ್ದೇಶವಾಗಿದೆ.

### ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಗಳ ಪುನಶ್ಚೇತನ ಕಾರ್ಯಕ್ರಮ'ದ ಬಗ್ಗೆ:

- **ಆರಂಭ:-** ಇದನ್ನು **ಕೇಂದ್ರ ಪರಿಸರ ಸಚಿವಾಲಯವು 2017 ರಲ್ಲಿ** ಪ್ರಾರಂಭಿಸಿತು.

**ಉದ್ದೇಶ:-** ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಗಳ **ಸಂಖ್ಯೆ ಕ್ಷೀಣಿಸುತ್ತಿರುವ ಬಗ್ಗೆ ಜಾಗೃತಿ** ಮೂಡಿಸುವುದು ಮತ್ತು ರಾಷ್ಟ್ರೀಯ ಮಟ್ಟದಲ್ಲಿ **ಕೇಂದ್ರೀಕೃತ ಬಸ್ಟರ್ಡ್ ಸಂರಕ್ಷಣಾ ಕಾರ್ಯಕ್ರಮವನ್ನು** ಅನುಷ್ಠಾನಗೊಳಿಸುವ ಮಹತ್ವವನ್ನು ಎತ್ತಿ ತೋರಿಸುವುದು ಇದರ ಉದ್ದೇಶವಾಗಿದೆ.

### WWF-ಇಂಡಿಯಾ:-

WWF

ಈ ಸಂಸ್ಥೆಯು **'ಮರುಭೂಮಿ ರಾಷ್ಟ್ರೀಯ ಉದ್ಯಾನವನ' ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಗಳ ಸಂರಕ್ಷಣೆಗಾಗಿ** ಹಲವು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ.